ಕೆಲಸಗಾರರು ಏಣಿಗಳನ್ನು ಹತ್ತಿ ಹಾರೆಗಳಿಂದ ಹೆಂಚುಗಳನ್ನು ಎಬ್ಬಿಸತೊಡಗಿದ್ದೇ ಕೆಲವು ಹೆಂಚುಗಳು ಸಡಿಲಗೊಂಡು ಟಪಟಪವೆಂದು ಕೆಳಗೆ ಬಿದ್ದು ಒಡೆದುಹೋಗುತ್ತವೆ. ಆಮೇಲೆ ಕೆಲವು ಶಾಟ್‌ಗಳು ಕೆಲಸಗಾರರು ಹಾರೆಗಳಿಂದ ನಾಲ್ಕೈದು ಸಲ ಅಗೆದದ್ದೇ ಇಡೀ ಮನೆ ಒಂದು ಕಡೆಯಿಂದ ಇನ್ನೊಂದು ಕಡೆಯವರೆಗೆ ತನ್ನಷ್ಟಕ್ಕೆ ತಾನೇ ನೆಲಸಮವಾಗುವುದನ್ನು ತೋರಿಸುತ್ತವೆ. ಇನ್ನೊಂದು ಶಾಟನಲ್ಲಿ ನೆಲದಿಂದ ಮೇಲೇಳುವ ಧೂಳು ಇಡೀ ಬೆಳ್ಳಿತೆರೆಯನ್ನು ಆವರಿಸಿಕೊಳ್ಳುತ್ತದೆ.

ಕೆಲಸಗಾರರು ರಾಶಿಬಿದ್ದಿದ್ದ ಮಣ್ಣು ಇಟ್ಟಿಗೆ ಚೂರು ಗಾರೆ ಜಲ್ಲಿ ಮೊದಲಾದವನ್ನು ಅಲ್ಲಿಂದ ಎಲ್ಲಿಗೋ ಸಾಗಿಸುತ್ತಾರೆ. ಇನ್ನು ಕೆಲವರು ನೆಲವನ್ನು ಮಟ್ಟಸ ಮಾಡುತ್ತಿರುವಾಗ ಕ್ಯಾಮೆರಾ ಝೂಮ್ ಇನ್ ಆದದ್ದೇ ಒಂದು ಕಡೆ ಉದ್ದಕ್ಕೂ ಮಲಗಿದ ಅಸ್ಥಿಪಂಜರವೊಂದು ಕಾಣಿಸುತ್ತದೆ. ಎಲ್ಲವೂ ಎಲ್ಲರಿಗೂ ಸ್ಪಷ್ಟವಾಗಿ ಕಾಣಿಸುವಂಥ ನಡುಹಗಲು. ಕೆಲಸಗಾರರು ಹೆದರಿಕೆಯಿಂದ ಬೆವರಿ ಸ್ವಲ್ಪ ದೂರದಲ್ಲಿ ಮರದ ಕೆಳಗೆ ನಿಂತು ಬೀಡಿ ಸೇದುತ್ತಿದ್ದ ಕಂಟ್ರಾಕ್ಟರಿಗೆ ಸುದ್ದಿ ಮುಟ್ಟಿಸುತ್ತಾರೆ. ಕಂಟ್ರಾಕ್ಟರು ಬಂದು ನೋಡಿದವನು ಮೈಯಲ್ಲಿ ನಡುಕವುಂಟಾದರೂ ತೋರಿಸಿಕೊಳ್ಳದೆ ಇನ್ನೊಂದು ಬೀಡಿ ಹಚ್ಚಿಕೊಂಡು, ತುಂಬಾ ಹಳೆಯ ಸ್ಕೆಲಿಟನ್. ಯಾರದು ಅಂತ ಯಾರಿಗೆ ಗೊತ್ತಾಗುತ್ತೆ? ಪಕ್ಕದಲ್ಲೇ ಐದಾರು ಅಡಿ ಆಳದ ಗುಂಡಿ ಅಗೆದು ಅದನ್ನು ಮುಚ್ಚಿಬಿಡಿ ಎನ್ನುತ್ತಾನೆ. ನಂತರದ ಶಾಟ್‌ನಲ್ಲಿ ಅವನು ಕಮಲಾಕ್ಷಿಗೆ ಏನೋ ಹೇಳುತ್ತಿರುವುದು ನನಗೆ ಸರಿಯಾಗಿ ಕೇಳಿಸುವುದಿಲ್ಲ.



ಏನೋ ನೆನಪಾದವಳಂತೆ ಹಾಲಿಗೆ ನುಗ್ಗುತ್ತಾಳೆ ಕಮಲಾಕ್ಷಿ. ಬಿಳಿಗೋಡೆಯ ಮೇಲಿರುವ ಚಿತ್ರಪಟದಲ್ಲಿ ಹರಿಯುತ್ತಿರುವ ಒಂದು ನದಿ. ಅದರ ಎರಡೂ ದಡಗಳಲ್ಲಿ ಎತ್ತರಕ್ಕೆ ಬೆಳೆದ ಮರಗಳು. ವಿಶಾಲವಾದ ಹಾಲಿನಲ್ಲಿ ಟೀಪಾಯಿಯ ನಾಲ್ಕು ಬದಿಗಳಲ್ಲಿ ನಾಲ್ಕು ಕುರ್ಚಿಗಳು. ಕಿಟಕಿಯ ಬಳಿ ಹೊರಗೇನನ್ನೋ ನೋಡುತ್ತ ಕೂತಿರುವ ಒಬ್ಬ ಮನುಷ್ಯ. ಅರೆತೋಳಿನ ಷರ್ಟು ತೊಟ್ಟುಕೊಂಡ, ಕಚ್ಚೆಪಂಚೆ ಉಟ್ಟುಕೊಂಡ ಆತ ಹಾಗೇ ತುಂಬ ಹೊತ್ತು ಕೂತಿದ್ದಾನೆ ಎಂದು ಅನ್ನಿಸುವ ಹೊತ್ತಿಗೆ ಮೇಲೆದ್ದು ಹಾಲಿನಲ್ಲಿ ಶತಪಥ ತಿರುಗತೊಡಗುತ್ತಾನೆ. ಹಾಗೆ ತಿರುಗುತ್ತಿರುವಾಗಲೇ ಒಮ್ಮೆ ಕೈಯಿಂದ ಹಣೆ ಚಚ್ಚಿಕೊಳ್ಳುತ್ತಾನೆ; ತಿರುಗಿದ್ದು ಸಾಕು ಅನ್ನಿಸಿದ್ದೇ ಮತ್ತೆ ಅದೇ ಕುರ್ಚಿಯಲ್ಲಿ ಕುಕ್ಕರಿಸುತ್ತಾನೆ. ಅವನನ್ನು ನೋಡಿದ್ದೇ ಗಡಗಡನೆ ನಡುಗಿಹೋಗುವ ಕಮಲಾಕ್ಷಿ ತನ್ನ ರೂಮಿನ ಬಾಗಿಲು ತೆರೆದು ಒಂದು ದೀಪ ಹಚ್ಚುತ್ತಾಳೆ. ಅದು ಗಾಳಿಗೆ ಸಿಕ್ಕಿತೆನ್ನುವಂತೆ ಇದ್ದಕ್ಕಿದ್ದ ಹಾಗೆ ತೊಯ್ದಾಡಿ ನಾಲ್ಕು ಮೂಲೆಗಳಲ್ಲೂ ಭಯಂಕರ ನೆರಳುಗಳನ್ನು ಕುಣಿದಾಡಿಸುತ್ತದೆ. ಅವಳು ಎಷ್ಟೋ ವರ್ಷಗಳ ಹಿಂದೆ ತಾನೇನೋ ಅಡಗಿಸಿಟ್ಟದ್ದೆ ಎನ್ನುವಂತೆ ಹುಡುಕಾಡತೊಡಗಿದಾಗ ಮಂಚದಡಿಯಲ್ಲಿ ಸಿಕ್ಕುತ್ತದೆ ಒಂದು ದಿಂಬು. ಅದರ ಮೇಲೆ ಒಂದು ಕಡೆ ಪಾವಾಣೆಯಷ್ಟು ಒದ್ದೆಯಾಗಿರುವ ಜಾಗ. ತಕ್ಷಣ ಅವಳಿಗೆ ಅದು ತನ್ನ ಗಂಡ ಸಾಯುವ ಮೊದಲು ಸುರಿಸಿದ್ದ ಜೊಲ್ಲು ಎಂದು ಹೊಳೆದದ್ದೇ ನೆರಳುಗಳನ್ನು ದಿಟ್ಟಿಸಿ ನೋಡುತ್ತಾಳೆ. ಅದಾಗ ಒಂದು ಮೂಲೆಯಿಂದ, ‘ನಾನು ಸತ್ರೂ ಬಿಡೋಲ್ಲ, ಪ್ರೇತವಾಗಿ ಬಂದು ಕಾಡ್ತೇನೆ’ ಎಂದು ಯಾರೋ ಕೂಗಿದಂತಾಗಿ ಅವಳು ಕೈಕಾಲು ಸೋತುಬಂದಂತೆ ಕುಸಿದುಬೀಳುತ್ತಾಳೆ. ಆಮೇಲೆ ಕ್ಯಾಮೆರಾ ನಡುಮನೆಯಲ್ಲಿ ಕಿರುಗುಟ್ಟುತ್ತ ಮೆಲ್ಲಗೆ ತೂಗುತ್ತಿರುವ